## 4. ಸರ್ಕಾರಿ ಪ್ರಾಥಮಿಕ ಶಾಲೆ, ಬಿಲಗೋಡಿ ಹೊಸನಗರ

ನಮ್ಮ ಶಾಲೆಯು 14-09-2006 ರಂದು ಪ್ರಾರಂಭವಾಗಿರುತ್ತದೆ. ಇದು ಆರಂಭದಲ್ಲಿ ಗ್ರಾಮಸ್ಥರು ನಿರ್ಮಿಸಿದ ಒಂದು ಗುಡಿಸಲಿನಲ್ಲಿ ಪಾಠ ಪ್ರವಚನಗಳು ನಡೆಯುತಿತ್ತು. ನಂತರ ಇಲಾಖೆಯಿಂದ 2006-07 ನೇ ಸಾಲಿನಲ್ಲಿ ಒಂದು ಕಟ್ಟಡ ಮಂಜೂರಾಗಿ ಅಲ್ಲಿಗೆ ಇಲಾಖೆಯು ಒಬ್ಬ ಶಿಕ್ಷಕರನ್ನು ನಿಯೋಜನೆ ಮಾಡಿತು. ತದನಂತರದಲ್ಲಿ ಮತ್ತೊಬ್ಬ ಖಾಯಂ ಶಿಕ್ಷಕರನ್ನು ನೇಮಕಾತಿಮಾಡಿ ಈ ಶಾಲೆಗೆ ಸ್ಥಳ ನಿಯುಕ್ತ ಮಾಡಲಾಯಿತು . ಈ ಸಂದರ್ಭದಲ್ಲಿ ಮಕ್ಕಳ ಸಂಖ್ಯೆ 37 ಇತ್ತು. ಇದನ್ನು ಮನಗಂಡು ಮತ್ತೊಬ್ಬ ಶಿಕ್ಷಕರನ್ನ ಈ ಶಾಲೆಗೆ ನೇಮಕಾತಿ ಮಾಡಿಕೊಂಡು ಇಬ್ಬರು ಶಿಕ್ಷಕರಿಗೆ ಒಂದು ಕೊಠಡಿ ಸಾಲದೆಂದು 2008-09 ನೇ ಸಾಲಿನಲ್ಲಿ ಮತ್ತೊಂದು ಹೆಚ್ಚುವರಿ ಕೊಠಡಿಯನ್ನು ಮಂಜೂರು ಮಾಡಿಕೊಡಲಾಯಿತು. ಹೀಗೆ ನಮ್ಮ ಶಾಲೆಗೆ ಅಕ್ಷರ ದಾಸೋಹ ಅಡುಗೆ ಕೋಣೆ ದಾಸ್ತಾನು ಕೊಠಡಿ, ಶೌಚಾಲಯ ನಮ್ಮ ಶಾಲೆಗೆ ಮಂಜೂರು ಆಗಿ ಬಂದವು. ಇವೆಲ್ಲವನ್ನು ಶಿಕ್ಷಕರು ಮತ್ತು S.D.M.C ಯವರ ನೇತೃತ್ವದಲ್ಲಿ ಸುಸಜ್ಜಿತವಾಗಿ ನಿರ್ಮಿಸಿ ಕೊಳ್ಳಲಾಯಿತು.

ಈ ಎಲ್ಲಾ ಕಾರ್ಯಚಟುವಟಿಕೆಗಳ ಮಧ್ಯೆ ಮಕ್ಕಳ ಶೈಕ್ಷಣಿಕ ಸರ್ವತೋಮುಖ ಬೆಳವಣಿಗೆಗೆ ಹೆಚ್ಚಿನ ಗಮನ ನೀಡಲಾಯಿತು. ಹೀಗೆ ನಮ್ಮ ಶಾಲಾ ಕಟ್ಟಡದಲ್ಲಿ, ನಮ್ಮ ಮತ್ತು S.D.M.C ಯವರ ಶ್ರಮದಾನದಿಂದ ಉಳಿದ ಸುಮಾರು 75 ಸಾವಿರ ರೂಗಳಲ್ಲಿ ಮಕ್ಕಳಿಗೆ ಆಟದ ಸಾಮಾಗ್ರಿಗಳನ್ನು ನಿರ್ಮಿಸಿಕೊಡಲಾಯಿತು. 2008 ಅಕ್ಟೋಬರ್ 02 ರ ಗಾಂಧಿ ಜಯಂತಿ ಆಚರಣೆಯ ನಂತರ ಶಾಲೆಯಲ್ಲಿ ಎರಡು ತೆಂಗಿನ ಗಿಡಗಳನ್ನು ನೆಟ್ಟು ಗ್ರಾಮಸ್ಥರ ಸಹಾಯದಿಂದ ಮತ್ತು ಶ್ರೀ ಧರ್ಮಸ್ಥಳ ಸ್ವ-ಸಹಾಯದಿಂದ ಸಂಘದವರಿಂದ ಶಾಲೆಯ ಸುತ್ತಲು ಬಿದಿರು ಬೇಲಿಯನ್ನು ನಿರ್ಮಿಸಲಾಯಿತ. ಹಂತ ಹಂತವಾಗಿ ದಾನಿಗಳ ಸಹಕಾರದಿಂದ ಕಲ್ಲು ತಂತಿ ಬೇಲಿಯನ್ನು ನಿರ್ಮಿಸಿಕೊಳ್ಳಲಾಯಿತು. ಸ್ಥಳೀಯ ಗ್ರಾಮ ಪಂಚಾಯತಿಯವರು ಸುಮಾರು 150 ಮೀ ಕಾಂಪೌಂಡ ನಿರ್ಮಿಸಿ ಕೊಟ್ಟಿದ್ದಾರೆ. ನಾವು ದಾನಿಗಳ ನೆರವಿನಿಂದ ಈ ಕಾಂಪೌಡಿನ ಎದುರುಗಡೆ ಸಂಪೂರ್ಣವಾಗಿ ಸಾಧಕರ, ಐತಿಹಾಸಿಕ, ಮತ್ತು ಪ್ರಾಣಿಗಳ ಚಿತ್ರಗಳನ್ನು ಬಿಡಿಸಲಾಗಿದೆ. ಈಗ ನಮ್ಮ ಶಾಲೆ ಒಂದು ಸುಂದರವಾದ ಕೈತೋಟವನ್ನು ಹೊಂದಿ, ಸರ್ಕಾರದ ನೆರವಿನಿಂದ ಕೊಳವೆ ಬಾವಿಯನ್ನು ನಿರ್ಮಿಸಿಕೊಂಡು ನೀರಿನ ಕೊರತೆ ಇಲ್ಲದೆ, ಸುತ್ತ ಮುತ್ತಲಿನ ಜನರು, 'ಶಾಲೆ ಎಂದರೆ ಹೀಗಿರಬೇಕು' ಎಂದು ಜನ ಮಾತಾಡಿ ಕೊಳ್ಳುವಂತಿದೆ, ಒಂದು ಶಾಲೆಗೆ ಏನೆಲ್ಲ ಬೇಕೊ ಅದನ್ನು ಬಹುತೇಕವಾಗಿ ನಾವು ಪಡೆದುಕೊಂಡಿರುತ್ತೇವೆ .

1) ನಮ್ಮ ಶಾಲೆಯ ಕಾಂಪೌಡ್ ಎದುರುಗಡೆಯ ಗೋಡೆಗೆ ಸಂಪೂರ್ಣವಾಗಿ ದಾನಿಗಳ ನೆರವಿನಿಂದ ಐತಿಹಾಸಿಕ ಸ್ಥಳಗಳ, ಸಾದಕರ ಮತ್ತು ವನ್ಯಪ್ರಾಣಿಗಳ ಚಿತ್ರಗಳನ್ನು ಬಿಡಿಸಲಾಗಿದೆ .
2) ಸುಂದರವಾದ ಕೈತೋಟ ನಿರ್ಮಿಸಿಕೊಂಡಿರುತ್ತೇವೆ
3) ಪ್ರತಿ ಮಗುವಿಗೂ ಒಂದೊಂದು ಜವಾಬ್ದಾರಿ ಹಂಚಿಕೆ ಮಾಡಲಾಗಿದೆ
4) ವಾರಕ್ಕೆ ಒಂದುಬಾರಿ ಮಗ್ಗಿ ಮೇಳ ಮಾಡುತ್ತೇವೆ ,
5) ಪ್ರತಿ ಮಗುವು ದಿನ ನಿತ್ಯ 10 ಇಂಗ್ಲೀಷ್ ಪದಗಳನ್ನು ಬರೆದುಕೊಂಡು ಹೇಳುವ ಪರಿಪಾಠ
6) ದಿನಕ್ಕೊಂದು ಪುಸ್ತಕ ಪರಿಚಯ
7) ದಿನಕ್ಕೊಂದು ಹೊಸ ಸುದ್ದಿ ತಿಳಿದುಕೊಂಡು ಮಗು ಹೇಳುವುದು ,
8) ಶಾಲೆಯ ಸಂಪೂರ್ಣ ಜವಾಬ್ದಾರಿ ಮಕ್ಕಳೆ ನಿರ್ವಹಿಸುವುದು ,
9) ಕೈ ತೋಟದ ನಿರ್ವಹಣೆಯನ್ನು ಮಕ್ಕಳೆ ನಿರ್ವಹಿಸುವುದು,
10) ವಾರದಲ್ಲಿ ಒಂದು ಅವದಿ ಕ್ಷೇತ್ರ ಬೇಟಿ

1) ಆರಂಭದಲ್ಲಿ ನಮಗೆ ಪೋಷಕರ ಮತ್ತು ಗ್ರಾಮಸ್ಥರ ಸಹಕಾರ ಕಡಿಮೆ ಇತ್ತು
2) ನೀರಿನ ಸಮಸ್ಯೆ
3) ಬೇಲಿ ನಿರ್ಮಾಣದ ಸಮಸ್ಯೆ

4) ದನಕರುಗಳ ಕಾಟ

ಇವೆಲ್ಲಾ ಸಮಸ್ಯೆಗಳನ್ನು ನಾವು ಸವಾಲು ಆಗಿ ಸ್ವೀಕಾರ ಮಾಡಿ ಸಮಸ್ಯೆಗೆ ಪರಿಹಾರ ಕಂಡು ಕೊಂಡೆವು.

ಮೊಟ್ಟಮೊದಲನೆಯದಾಗಿ ಪೋಷಕರ ಮನವೊಲಿಸುವಲ್ಲಿ ಯಶಸ್ವಿಯಾದೆವು ,

1) ಧರ್ಮಸ್ಥಳ ಸ್ವ-ಸಹಾಯ ಸಂಘದ ನೆರವಿನಿಂದ ಶಾಲಾ ಸುತ್ತಲು ಬೇಲಿ ನಿರ್ಮಿಸಿ ಕೊಂಡೆವು

2) ಗ್ರಾಮ ಪಂಚಾಯಿತಿ ನೆರವಿನಿಂದ ತೆರೆದ ಬಾವಿ ಮತ್ತು ಜಿಲ್ಲಾ ಪಂಚಾಯಿತಿ ನೆರವಿನಿಂದ ಕೊಳವೆ ಬಾವಿ ನಿರ್ಮಿಸಿಕೊಂಡು ನೀರಿನ ಸಮಸ್ಯೆ ಬಗೆಹರಿಸಿಕೊಂಡೆವು.

ನಮ್ಮ ಶಾಲೆಯ ಸರ್ವತೋಮುಖ ಬೆಳವಣಿಗೆಗೆ ಗ್ರಾಮಸ್ಥರು, ಪೋಷಕರು, S.D.M.C ಯವರು ಹಳೆವಿದ್ಯಾರ್ಥಿಗಳು ,ಸುತ್ತಮುತ್ತಲಿನ ಗ್ರಾಮಸ್ಥರ ತನು,ಮನ ಧನ ಸಹಾಯದ ಜೊತೆಗೆ ಶ್ರಮ ದಾನವನ್ನು ಸಂಪೂರ್ಣವಾಗಿ ನೀಡಿರುತ್ತಾರೆ.

1. ನಮ್ಮ ಶಾಲೆಗೆ ದಿನಾಂಕ 06-97-2015 ರಂದು ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾ ಅಧಿಕಾರಿಗಳು ಭೇಟಿಕೊಟ್ಟು ಪ್ರಶಂಸೆ ವ್ಯಕ್ತಪಡಿಸಿದ್ದಾರೆ, ನಮ್ಮ ಶಾಲೆಯಲ್ಲಿಯೇ ಬೆಳೆದ ಕುಂಬಳಕಾಯಿ, ಸುವರ್ಣಗಡ್ಡೆ ಇತ್ಯಾದಿ ತರಕಾರಿಗಳನ್ನು ನೋಡಿ ತುಂಬಾ ಸಂತೋಷ ಪಟ್ಟರು.
2. ನಮ್ಮ ಶಾಲೆಯು ಕ್ಲಸ್ಟರ್ ಮತ್ತು ತಾಲ್ಲೂಕು ಹಂತದಲ್ಲಿ ಪ್ರತಿ ವರ್ಷವು ನಡೆಯುವ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಿ ಬಹುಮಾನ ಪಡೆದುಕೊಂಡಿದ್ದಾರೆ, ನಮ್ಮ ಶಾಲೆಗೆ ಸತತವಾಗಿ ಕಳೆದ ವರ್ಷಗಳಿಂದ ಪರಿಸರ ಅಧ್ಯಯನ ತಂಡ ಕೊಡಮಾಡುವ ಧನ್ವಂತರಿ ಮತ್ತು ಹಳದಿ ಶಾಲಾ ಪ್ರಶಸ್ತಿಗಳು ಲಭಿಸಿದೆ.


ಮದರ ತೆರೇಸಾ
ಕವಿಮನೆ - ಕುಪ್ಪಳ್ಳಿ




